ದಿ: **6.7.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಅರ್ಜಿದಾರರ ಪರವಾಗಿ ಶ್ರೀ ವಕೀಲರಿಂದಃ

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅವುಗಳ ಬಗ್ಗೆ ಮಾಹಿತಿಯನ್ನು ನಾನು ನೀಡಿರುತ್ತೇನೆ. ಅದರಲ್ಲಿ ಬರೆದ ವಿಷಯಗಳು ಸತ್ಯವಾಗಿರುತ್ತವೆ.

ನಿಪಿ-22 ನ್ನು ನಾನೇ ನೀಡಿರುತ್ತೇನೆ.

ಪಾಟೀ ಸವಾಲು 3 ನೇ ಎದುರುದಾರರ ಪರ ಶ್ರೀ ಡಿ ಸಿ ಪಿ ವಕೀಲರಿಂದಃ

ನಾನು ಅರ್ಜಿದಾರರಿಗೆ ಚಿಕಿತ್ಸೆ ನೀಡಿಲ್ಲ ಎಂದರೆ ಸರಿ. ಅರ್ಜಿದಾರರು ನನ್ನ ಬಳಿ ಯಾವುದೇ ರೀತಿ ಚಿಕಿತ್ಸೆ ಪಡೆದಿಲ್ಲ. ಕೇವಲ ಅಂಗ ನ್ಯೂನ್ಯತೆ ದೃಢೀಕರಣ ಪತ್ರ ಪಡೆಯಲು ಬಂದಿದ್ದರು. ಅರ್ಜಿದಾರರು ಏನು ಉದ್ಯೋಗ ಮಾಡುತ್ತಿದ್ದೇನೆ ಎಂದು ತಿಳಿಸಲಿಲ್ಲ. ಮೊದಲು ಮೋಟಾರ್ ವೈಂಡರ್ ಕೆಲಸ ಮಾಡುತ್ತಿದ್ದೆ ಎಂದು ಹೇಳಿದ್ದಾರೆ. ನಾನು ಹೇಳುವಂತೆ ಅರ್ಜಿದಾರರು ಯಾವತ್ತೂ ಬಂದಿಲ್ಲ ಮತ್ತು ನಾನು ಅವರನ್ನು ಪರೀಕ್ಷೆ ಮಾಡಿ ಯಾವುದೇ ಅಂಗ ನ್ಯೂನ್ಯತೆ ದೃಢೀಕರಣ ಪತ್ರ ಕೊಟ್ಟಿಲ್ಲ ಎಂದರೆ ಸರಿಯಲ್ಲ.ಅ ರ್ಜಿದಾರರು ಮೋಟಾರ್ ವೈಂಡರ್ ಎನ್ನುವ ಬಗ್ಗೆ ಯಾವುದೇ ದಾಖಲೆಯನ್ನು ಪರಿಶೀಲನೆ ಮಡಿಲ್ಲ. ಅವರು ಭಾರ ಎತ್ತಲು ಸಮರ್ಥರು ಇದ್ದಾರೋ ಇಲ್ಲ ಎನ್ನುವ ಬಗ್ಗೆ ಬೌತಿಕವಾಗಿ ಪರೀಕ್ಷೆ ಮಾಡಿಲ್ಲ. ನಾನೇ ಸ್ವತಃ ಸ್ಪೈನ್ ಸರ್ಜನ್ ಇರುವ ಕಾರಣ ನ್ಯೂರೋ ಸರ್ಜನ್ ಸಲಹೆ ಪಡೆಯುವ ಅವಶ್ಯಕತೆ ಇರಲಿಲ್ಲ.

ಅರ್ಜಿದಾರರು ನನ್ನ ಬಳಿ ಬಂದಾಗ ಗಾಯದ ಪ್ರಮಾಣ ಪತ್ರ ಮತ್ತು ಬಿಡುಗಡೆ ಪತ್ರ ತೋರಿಸಿದ್ದರು. ದಾವಣಗೆರೆ ಆಸ್ಪತ್ರೆಯವರು ಆ ದಾಖಲೆಗಳನ್ನು ನೀಡಿದ್ದರು ಎಂದರೆ ಸರಿ. ನಾನು ಪ್ರತ್ಯೇಕ ಎಕ್ಸ್‌ರೇ ತೆಗೆಸಿಲ್ಲ ಎಂದರೆ ಸರಿಯಲ್ಲ. ನಾನು ಬೇರೆ ರೀತಿ ಪರೀಕ್ಷೆ ಮಾಡಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಯಾವುದೇ ರೀತಿ ತೊಂದರೆಗಳು ಇಲ್ಲದೇ ಇದ್ದರೂ ಸಹ ಅವರಿಗೆ ಹಲವಾರು ನ್ಯೂನ್ಯತೆಗಳು ಕಂಡು ಬಂದಿವೆ ಎಂದು ಸುಳ್ಳು ಬರೆದಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಸಾಮಾನ್ಯ ಜಪೀವನ ನಡೆಸಲು ತೊಂರದೆ ಇದೆ ಎಂದು ಸುಳ್ಳು ಬರೆದಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರನ್ನು ಸರಿಯಾಗಿ ತಪಾಸಣೆ ಮಾಡಿ ಕೇವಲ ಅವರ ಕೋರಿಕೆ ಮೇರೆಗೆ ಹೆಚ್ಚಿನ ಪ್ರಮಾಣದ ನ್ಯೂನ್ಯತೆ ತೋರಿಸಿ ದೃಢೀಕರಣ ಪತ್ರ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಶೇಕಡಾ 55 ರಷ್ಟು ಅಂಗ ನ್ಯೂನ್ಯತೆ ಇದೆ ಎಂದು ಯಾವ ಆಧಾರದಲ್ಲಿ ಹೇಳಿದ್ದೇನೆ ಎನ್ನುವ ಬಗ್ಗೆ ಬರೆದಿಲ್ಲ

ಎಂದರೆ ಸರಿ . ನಾನು 2018 ರ ಎಂ ಸಿ ಎ ಮಾನದಂಡಗಳನ್ನು ಅನುಸರಿಸಿಲ್ಲ ಎಂದರೆ ಸರಿಯಲ್ಲ. ಅಂಗ ನ್ಯೂನ್ಯತೆ ಕಂಡು ಹಿಡಿಯುವ ಬಗ್ಗೆ ಟಿಪ್ಪಣಿಯನ್ನು ತಯಾರು ಮಾಡಿಲ್ಲ. ನಾನು ಕೇವಲ ಅರ್ಜಿದಾರರ ಕೋರಿಕೆ ಮೇರೆಗೆ ಉತ್ಪ್ರೇಕ್ಷೆ ದೃಢೀಕರಣ ಪತ್ರ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ. ಸರಿ ಇದೆ,

**ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
ವಿಶೇಷ ನ್ಯಾಯಾಲಯ, ಬಳ್ಳಾರಿ.